ಎಂ.ಎನ್. ಸೋಮಶೇಖರ್, ಮೈಸೂರು
*ನಾರದರ ಸೃಷ್ಟಿ ಏಕೆ ಆಯಿತು?*




ದೇವಲೋಕದವರಿಗೆ ಒಬ್ಬ ಇನ್‌ಫಾರ್ಮೇಷನ್ ಅಂಡ್ ಬ್ರಾಡ್‌ಕಾಸ್ಟಿಂಗ್ ಮಿನಿಸ್ಟರ್ ಬೇಕಾದುದರಿಂದ!

ಸೃಜನ ಜೈನ್, ಹೂವಿನಹಡಗಲಿ
*ಪ್ರಶ್ನೆ ಕೇಳುವಂತವರೇ ಇಲ್ಲವಾಗಿಬಿಟ್ಟರೆ ಉತ್ತರ ರಾಮ್‌ಗೆ ಕೀರ್ತಿ ಲಭಿಸುವುದು ಹೇಗೆ?*
ನಿಜವೇ. ಆದರೆ ಅತ್ತೆ, ಸೊಸೆ, ಕುಡುಕರು, ಬಾಸ್ ಇರುವವರೆಗೆ ಪ್ರಶ್ನೆಗಳು ಇದ್ದೇ ಇರುತ್ತವೆ.

ಹರಳಹಳ್ಳಿ ಪುಟ್ಟರಾಜು, ಪಾಂಡವಪುರ
*ಮನುಷ್ಯನಿಗೂ, ದೇವರಿಗೂ ಇರುವ ವ್ಯತ್ಯಾಸವೇನು?*
ದೇವ ಸಂಬಳ, ರಿಟೈರ್‌ಮೆಂಟ್, ಊಟ, ಏನೂ ಇಲ್ಲದೆ 24 X 7 ದುಡಿಯಬೇಕಾದ ರಕ್ಷಕ. ಮಾನವ ಸರ್ವಭಕ್ಷಕ!

ಪಿ.ಎನ್.ಶ್ರೀವತ್ಸ, ಬೆಂಗಳೂರು
*ದೇವಸ್ಥಾನಗಳಿಗೆ ಹೋದಮೇಲೆ ಕಡ್ಡಾಯವಾಗಿ ತೀರ್ಥ, ಆರತಿ ತೆಗೆದುಕೊಳ್ಳಲೇಬೇಕೆ?*
ಜೊತೆಗೆ ಬಂದವರಿಂದ ನಿಮಗೆ ಸಹಸ್ರನಾಮ, ಮಂಗಳಾರತಿ ಆಗುವುದು ಬೇಡ ಎಂದಿದ್ದರೆ ತೆಗೆದುಕೊಳ್ಳಿ.

ಜಯಂತ್, ನೆಲಮಂಗಲ
*ದೇವಾಲಯಕ್ಕೊಂದು ಗ್ರಂಥಾಲಯ ಇದ್ದರೆ ಹೇಗೆ ಸಾರ್?*




ಸರಿಯಿಲ್ಲ. ವಿದ್ಯಾರ್ಥಿಗಳು ಬಂದು ದೇವರೇ, ಪಾಸ್ ಮಾಡಿಸಪ್ಪಾ ಎಂದರೆ ಹೋಗಿ ಲೈಬ್ರರಿಗೆ, ಓದಿ ಎಂದು ಬೈದುಬಿಡುತ್ತಾನೆ!

ಬಿ.ಎಂ. ಪರಶಿವಮೂರ್ತಿ, ಬೆಂಗಳೂರು
*ಬೆಳಿಗ್ಗೆ ಹೋಗುವಾಗ ಟಾಟಾ ಅಂತಾಳೆ, ರಾತ್ರಿ ಬಂದಾಗ ರಾರಾ ರಾರಾ ಅಂತಾಳಲ್ಲಾ...?*
ನೀವು ಕುಡಿಯುವುದನ್ನು ಅವಳು ಹೇಳುತ್ತಿದ್ದಾಳಷ್ಟೆ– ಬೆಳಗ್ಗೆ ಟಾಟಾ ಟೀ, ರಾತ್ರಿ ನೀರು, ಸೋಡ ಸೇರಿಸಿಕೊಳ್ಳದ Raw ಹೆಂಡ!

ಜಿ.ಕೆ. ನಾಗಲಿಂಗಪ್ಪ, ಗುಳಿಗೇನಹಳ್ಳಿ
*ಪಾನಮತ್ತ ಅಸ್ವಸ್ಥ ಸಮಾಜದಿಂದ ಸಮಾಜ ಸುಧಾರಣೆ ಸಾಧ್ಯವೆ?*
ಗುಡ್. ನಿಮ್ಮಂತೆ ತಮ್ಮನ್ನು ತಾವೇ ಈ ರೀತಿ ಎಲ್ಲರೂ ಪ್ರಶ್ನಿಸಿಕೊಳ್ಳತೊಡಗಿದರೆ ಸುಧಾರಣೆ ಆಗಿಯೇಬಿಡುತ್ತದೆ.

ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ
*ಎರಡು ದೋಣಿಯ ಮೇಲಿನ ಪಯಣ ಎಂದರೆ ನಿಜವಾಗಿಯೂ ಹೇಗಿರುತ್ತದೆ ರಾಮ್‌ಜೀ?*
ದೋಣಿಯಲ್ಲಿ ಸಾಗುವ ಕ್ರಿಕೆಟ್ ನಾಯಕ ದೋಣಿಯ ಹೆಗಲೇರಿದ ಅವನ ಮಗನನ್ನು ಕೇಳಿ ಹೇಳುತ್ತೇನೆ.

ಎಂ.ಎಸ್.ಧರ್ಮೇಂದ್ರ, ಜಿಟಿಆರ್‌ಇ ಕ್ಯಾಂಪಸ್
*ಒಂದು ಕುಟುಂಬದಿಂದ ಒಬ್ಬನಿಗೆ ಮಾತ್ರ ರಾಜಕೀಯದಲ್ಲಿ ಅವಕಾಶವೆಂದು ಕಾನೂನು ಮಾಡಿದರೆ?*
ಪಕ್ಷ ಬದಲಾಯಿಸುವಂತೆ ಕುಟುಂಬ ಬದಲಾಯಿಸುವುದು ಜಾರಿಗೆ ಬರಬಹುದು!

ವಿ.ಹಮೀದ್, ವಿಟ್ಲ
*ಹುಡುಗನಿಗೆ ಮೀಸೆ ಬಂದರೆ ಅದು ಪುರುಷಲಕ್ಷಣ. ಹುಡುಗಿಗೆ ಮೀಸೆ ಬಂದರೆ...?*
ಬ್ಯೂಟಿ ಪಾರ್ಲರ್‌ನವರಿಗೆ ಶುಭಲಕ್ಷಣ.

ವಿ. ಹೇಮಂತ ಕುಮಾರ್, ಬೆಂಗಳೂರು
*ಅಳುವ ಹೆಣ್ಣಿಗೂ, ಆಳುವ ಹೆಣ್ಣಿಗೂ ವ್ಯತ್ಯಾಸವೇನು?*
ಎಡ್ಡಿಗೂ, ಸೋನಿಯಾಗೂ ಇರುವ ವ್ಯತ್ಯಾಸವೇ.

ಮಲ್ಲಿಕಾರ್ಜುನ ಹ. ಬಗಲಿ, ಗಿರಗಾಂವ
*ಮಗನನ್ನು ದೇವಲೋಕದ ದೀಪ, ಮಗಳನ್ನು ಕತ್ತಲೆಯ ಕೂಪ ಎಂದೇಕೆ ಹೇಳುವರು?*
ಸರಿಯೇ. ಅಷ್ಟು ದೂರದ ದೀಪ ಇದ್ದರೂ ಇಲ್ಲದಂತೆ, ಕತ್ತಲೆಯ ಕೂಪದಲ್ಲಿ ತಂಪಾದ ಜೀವಜಲ!

ಕೆ.ಎನ್. ನಾರಾಯಣರೆಡ್ಡಿ, ಕೆ.ಜಿ.ಎಫ್.
*ರಾಜಕಾರಣಿಗಳು ಗಾಂಧಿ ತತ್ವಗಳ ಬಗ್ಗೆ ಭಾಷಣ ಮಾಡುವುದಕ್ಕೂ, ಪತಿತೆ ಪಾತಿವ್ರತ್ಯದ ಬಗ್ಗೆ ಹೇಳುವುದಕ್ಕೂ ಇರುವ ವ್ಯತ್ಯಾಸವೇನು?*
ಛೆ! ಹಾಗೆಲ್ಲಾ ರಾಜಕಾರಣಿಗಳನ್ನು ಪತಿತೆಗೆ ಹೋಲಿಸಿ ಅವಳಿಗೆ ಅವಮಾನ ಮಾಡಬಾರದು ರೆಡ್ಡಿಗಾರು.

## ಬಹುಮಾನಿತ ಪ್ರಶ್ನೆ

ಪಿ. ಗೋವಿಂದರಾಜ್, ಶಿವಮೊಗ್ಗ
*ಅವಧಿಗೆ ಮುನ್ನ ಹುಟ್ಟಿದ ಕೂಸಿಗೆ ಏನೆಂದು ಹೆಸರು ಇಡಬೇಕು?*
ಅರ್ಜೆಂಟಪ್ಪ ಅಥವಾ ಪೂರ್ವಾಂಕುರ!

ಅನುರಾಧ, ಬೆಂಗಳೂರು
*ಜನರು ಮಾಲ್‌ಗಳಿಗೆ ಹೋಗಿ ಕಳಪೆ ಸಾಮಾನು ಕೊಂಡು ಹೆಚ್ಚು ಹಣ ಕೊಟ್ಟು ಬರುತ್ತಾರೆ, ಯಾಕೆ?*
ಮದ ಇರುವವರಿಗೆ ಹದ ತಿಳಿಯುವುದಿಲ್ಲವಲ್ಲ!

ಓಂ ಚನ್ನೇಶ್, ಅರಬಿಳಚಿ ಕ್ಯಾಂಪ್
*ಎಲ್ಲಾ ಪ್ರಾಣಿಗಳಿಗೂ ಬಾಲ ಇದೆ. ಅದೇ ತರಹ ಮನುಷ್ಯರಿಗೂ ಬಾಲ ಇದ್ದಿದ್ದರೆ?*
ಬಾಲಕೃಷ್ಣ, ಬಾಲರಾಜ, ಬಾಲಾಂಬ ಇತ್ಯಾದಿ ಹೆಸರುಗಳ ಅರ್ಥವೇ ಬೇರೆಯಾಗಿಬಿಡುತ್ತಿತ್ತು!

ಆರ್. ಮಧುಸೂದನ್, ಹಾಸನ
*ಜಿರಳೆ, ಕಪ್ಪೆ ತಿನ್ನುವ ಜಪಾನಿಯರಿಗಿರುವ ಬುದ್ಧಿವಂತಿಕೆ ಲಾಡು ಚಿರೋಟಿ ತಿನ್ನುವ ನಮಗೇಕಿಲ್ಲ?*



ಅವರಿಗೆ ತಮ್ಮ ಸ್ವಂತ ಮೆದುಳಿನ ಬುದ್ಧಿಯ ಜೊತೆಗೆ ಜಿರಳೆ, ಕಪ್ಪೆಗಳ ಮೆದುಳಿನ ಬುದ್ಧಿಯೂ ಸೇರುವುದಲ್ಲ!

ಬೋ.ಪಾ. ವೆಂಕಟೇಶ್, ಬೋಧನಹೊಸಹಳ್ಳಿ
*ಪ್ರಾಣಿಗಳಲ್ಲೆಲ್ಲ ಪಳಗಿಸಲಾಗದ ಪ್ರಾಣಿ ಯಾವುದು?*
ಸಂಶಯಾತ್ಮ.

ಎಂ.ಬಿ. ರಂಗಪ್ಪಶೆಟ್ಟಿ, ಮೋಕ
*ಯಡ್ಡಿಯ ಪಕ್ಷದ ಬಾನಂಗಳದ ತೋಟ ತಾರೆಗಳು ವಲಸೆ ಬಂದುದರಿಂದ ಪ್ರಜ್ವಲಿಸುತ್ತಿದೆಯಲ್ಲ ರಾಮ್?*
ಅದು ಕೇವಲ ಮೇಕಪ್ಪಿನ ಹೊಳಪು ಶೆಟ್ಟರೇ; ಒಮ್ಮೆ ನೀರಿಳಿಸಿ ಒರೆಸಿಬಿಟ್ಟರೆ ಬರೀ ಮಂಕು ಮಂಕು!

ಜೆ.ಆರ್.ಆದಿನಾರಾಯಣಮುನಿ, ಬೆಂಗಳೂರು
*ಒಂದು ವೇಳೆ ಬೆನ್ನಿಗೆ ಕಣ್ಣು ಇದ್ದಿದ್ದರೆ?*
ತೊಡುವ ಷರ್ಟ್‌ನ ಹಿಂಬದಿಯಲ್ಲಿ ಕಣ್ಣಳತೆಗೆ ತಕ್ಕಂತೆ ತೂತು ಹೊಲೆಯಬೇಕಾಗುತ್ತಿತ್ತು.

■ ರಾಮ್